**ಕಾರ್ಯತಂತ್ರದ ವ್ಯಾಪಾರ ಮತ್ತು ತಂತ್ರಜ್ಞಾನವನ್ನು ಒಳಗೊಂಡಂತೆ ಆರ್ಥಿಕ ಭದ್ರತೆಯ ಕುರಿತು ಭಾರತ-ಜಪಾನ್ ಮಾತುಕತೆಯ ಆರಂಭಿಕ ಸುತ್ತು**

ನವೆಂಬರ್ 27, 2024

ಜಪಾನ್‌ನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಉಪ ಮಂತ್ರಿ, ಶ್ರೀ ಮಸಟಕಾ ಒಕಾನೊ ಅವರೊಂದಿಗೆ ವಿದೇಶಾಂಗ ಕಾರ್ಯದರ್ಶಿ ಶ್ರೀ ವಿಕ್ರಮ್ ಮಿಸ್ರಿ ಅವರು 27 ನವೆಂಬರ್ 2024 ರಂದು ಟೋಕಿಯೋದಲ್ಲಿ ನಡೆದ ಕಾರ್ಯತಂತ್ರದ ವ್ಯಾಪಾರ ಮತ್ತು ತಂತ್ರಜ್ಞಾನ ಸೇರಿದಂತೆ ಆರ್ಥಿಕ ಸುರಕ್ಷತೆಯ ಕುರಿತಾಗಿ ಭಾರತ-ಜಪಾನ್ ಮಾತುಕತೆಯ 1 ನೇ ಸುತ್ತಿನ ಸಹ-ಅಧ್ಯಕ್ಷತೆ ವಹಿಸಿದ್ದರು. 20 ಆಗಸ್ಟ್ 2024 ರಂದು ನವದೆಹಲಿಯಲ್ಲಿ ನಡೆದ ಭಾರತ-ಜಪಾನ್ 2+2 ಸಚಿವರ ಸಭೆಯಲ್ಲಿ ಎರಡೂ ಸರ್ಕಾರಗಳ ಮಧ್ಯಸ್ಥಗಾರ ಸಚಿವಾಲಯಗಳು, ಇಲಾಖೆಗಳು ಮತ್ತು ಏಜೆನ್ಸಿಗಳು ಭಾಗವಹಿಸಿ ನಡೆಸಿದ ಸಂವಾದವನ್ನು ಘೋಷಿಸಲಾಯಿತು.

2. ಈ ಸಭೆಯು ಆಯಾ ಆರ್ಥಿಕ ಭದ್ರತಾ ನೀತಿಗಳ ಬಗ್ಗೆ ದೃಷ್ಟಿಕೋನಗಳನ್ನು ವಿನಿಮಯ ಮಾಡಲು, ಕೈಗಾರಿಕಾ ಮತ್ತು ತಾಂತ್ರಿಕ ಸ್ಥಿರತೆಯನ್ನು ನಿರ್ಮಿಸಲು ಪಾಲುದಾರಿಕೆಯನ್ನು ಬಲಪಡಿಸಲು ಮತ್ತು ಪ್ರಮುಖ ತಂತ್ರಜ್ಞಾನಗಳ ಸಂಶೋಧನೆ ಮತ್ತು ಅನ್ವಯದಲ್ಲಿ ಸಹಯೋಗವನ್ನು ಉತ್ತೇಜಿಸಲು ಅವಕಾಶವನ್ನು ಒದಗಿಸಿತು. ದ್ವಿ ರಾಷ್ಟ್ರಗಳಿಂದಲೂ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಲು ನಿಕಟ ಸಹಯೋಗದ ಅಗತ್ಯವನ್ನು ಒತ್ತಿಹೇಳಲಾಯಿತು ಮತ್ತು ಭಾರತ ಮತ್ತು ಜಪಾನಿನಲ್ಲಿ ಸಂಬಂಧಿತ ಕಚೇರಿಗಳ ನಡುವಿನ ವ್ಯವಹಾರ ಮತ್ತು ಶೈಕ್ಷಣಿಕ ಪಾಲುದಾರಿಕೆಗೆ ನೀತಿ ಸೌಲಭ್ಯದ ಮೂಲಕ, ಗುರುತಿಸಲಾದ ವಲಯಗಳಲ್ಲಿ ಸ್ಥಿರ ಪೂರೈಕೆ ಸರಪಳಿಗಳು ಮತ್ತು ನಿರ್ಣಾಯಕ ಮೂಲಸೌಕರ್ಯಗಳನ್ನು ನಿರ್ಮಿಸುವುದರ ಮಹತ್ವವನ್ನು ಎತ್ತಿ ಹಿಡಿಯಲಾಯಿತು. ಸಾಮಾನ್ಯ ಆಸಕ್ತಿಯ ಕ್ಷೇತ್ರಗಳಲ್ಲಿ ಪ್ರತಿಭೆಗಳ ವಿನಿಮಯ ಮತ್ತು ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಅವರು ಮಾರ್ಗಗಳನ್ನು ಕೂಡ ಸಾದರಪಡಿಸಿದರು.

3. ಕೇಂದ್ರೀಕೃತ ವಲಯಗಳಲ್ಲಿ ವರ್ಧಿತ ಸಮಗ್ರ ಸಹಯೋಗದ ಮೂಲಕ ನಿಖರ ಫಲಿತಾಂಶಗಳನ್ನು ಕಂಡುಕೊಳ್ಳಲು ಇಬ್ಬದಿಯಿಂದ ಒಪ್ಪಲಾಯಿತು. ಭಾರತ-ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಗೆ ಸಮಕಾಲೀನ ಪ್ರಸ್ತುತತೆಯನ್ನು ತರಲು ಅವರು ಸಂವಾದವನ್ನು ಮಹತ್ವದ ಮತ್ತು ಸಮಯೋಚಿತ ಹೆಜ್ಜೆ ಎಂದು ಗುರುತಿಸಿಕೊಂಡಿದ್ದಾರೆ.

**ನವದೆಹಲಿ ನವೆಂಬರ್ 27, 2024**